ಚಿಂತಕರನ್ನು ಆಕರ್ಷಿಸುವ 'ಇಂಡಿಯನ್ ಕಾಫಿ ಹೌಸ್' ಇರುವುದೂ ಇಲ್ಲಿಯೇ.

ಕಣ್ಣು ಹೋದಲ್ಲೆಲ್ಲ ಪುಸ್ತಕಗಳ ಅಟ್ಟಣೆಗಳು, ರಸ್ತೆಯ ಮೇಲೂ ಉಕ್ಕಿ ಹರಿಯುವ ಪುಸ್ತಕರಾಶಿ, ಇಂತಹ ರಸ್ತೆಯುದ್ದಕ್ಕೂ ನಡೆಯುವುದೇ ಒಂದು ವಿಶೇಷ. ಆ ಖುಷಿಯನ್ನು ವಿವರಿಸಲು ನನ್ನಲ್ಲಿ ಶಬ್ದಗಳಿಲ್ಲ. ಹೆಚ್ಚಿನವು ಸಣ್ಣಸಣ್ಣ ಗೂಡಂಗಡಿಗಳು, ಅಂಗಡಿ ಕಟ್ಟೆಯ ಮೇಲೆ ಕೈ ಇರಿಸಿ, ಕಾಲುದಾರಿಯಲ್ಲಿ ನಿಂತೇ ವ್ಯಾಪಾರ ಮಾಡಬಹುದಾದಂಥವು, ಇಟ್ಟಿಗೆ, ಸಿಮೆಂಟುಗಳಿಂದ ಕಟ್ಟಿದ ವ್ಯವಸ್ಥಿತ ಅಂಗಡಿಗಳೂ ಇದ್ದವು, ಬದಿಯಲ್ಲೇ ಬಿದಿರು-ತಾಡಪತ್ರ ತಗಡುಗಳ ತಾತ್ಕಾಲಿಕ ರಚನೆಗಳೂ ಇದ್ದವು. ಪ್ರತಿಯೊಂದು ಅಂಗಡಿಗೂ ತನ್ನದೇ ಚರಿತ್ರೆ, ಅದರದೇ ವೈಶಿಷ್ಟ್ಯ! ನಾಲ್ಕನೇ, ಐದನೇ ತಲೆಮಾರಿನವರು ನಡೆಸುತ್ತಿರುವ ಹೆಸರಾಂತ ಪುಸ್ತಕದಂಗಡಿಗಳೂ ಇಲ್ಲಿವೆ. 1886ರಷ್ಟು ಹಿಂದೆ ಸ್ಥಾಪಿತವಾದ ದಾಸ್‌ಗುಪ್ತ ಕಂಪೆನಿಯ ಅಂಗಡಿಯೊಳಗೆ ಹೋದಾಗ, ಅವರೊಡನೆ ಮಾತನಾಡುವ ಅವಕಾಶವೂ ಸಿಕ್ಕಿತು. ಕಾಲೇಜು ರಸ್ತೆಯು ಭಾರತದಲ್ಲಿ ಮಾತ್ರವಲ್ಲ, ಏಷ್ಯಾದಲ್ಲೇ ಅತ್ಯಂತ ದೊಡ್ಡ ಪುಸ್ತಕ ಮಾರುಕಟ್ಟೆಯಾಗಿದೆ ಎಂದು ಅವರು ಹೇಳಿದರಲ್ಲದೆ, ಪುಸ್ತಕ ಕೊಳ್ಳುವವರೂ ಈಗ ಹೆಚ್ಚಾಗಿದ್ದಾರೆ ಎಂದರು. ಓದಿ ಹಳತಾದ (ಸೆಕೆಂಡ್ ಹ್ಯಾಂಡ್) ಪುಸ್ತಕಗಳ ಅಂಗಡಿಗಳೇ ಈ ರಸ್ತೆಯಲ್ಲಿ ಸಾಕಷ್ಟಿವೆ. ಜಗತ್ತಿನಲ್ಲೇ ಅತ್ಯಂತ ದೊಡ್ಡ ಹಳೇ ಪುಸ್ತಕಗಳ ಮಾರುಕಟ್ಟೆ ಇದು ಎಂದೂ ಹೇಳುತ್ತಾರೆ.

ಇತ್ತೀಚೆಗಿನ ದಿನಗಳಲ್ಲಿ ಆನ್‌ಲೈನ್ ಪುಸ್ತಕ ಖರೀದಿಗಳು ಹೆಚ್ಚಿ, ಜಗತ್ತಿನಾದ್ಯಂತ ಅನೇಕ ಪುಸ್ತಕದಂಗಡಿಗಳು ಮುಚ್ಚುತ್ತಿರುವ ಸಮಯದಲ್ಲೂ ಕೊಲ್ಕತ್ತದ ಜನರು ಕಾಲೇಜು ರಸ್ತೆಯ ಮೋಹವನ್ನು ಬಿಟ್ಟಿಲ್ಲ. ನಗರದ 'ಪುಸ್ತಕಪ್ರಿಯರ ಮೆಕ್ಕಾ' ಎಂಬ ಪ್ರತೀತಿ ಹೊಂದಿರುವ ಈ ರಸ್ತೆಯಲ್ಲಿ ಯಾವಾಗಲೂ ಗಿಜಿಗುಟ್ಟುವ ಮಂದಿ. ಎಲ್ಲೆಂದರಲ್ಲಿ ಕಾಲು ಹಾಕಿದಲ್ಲಿ ಪುಸ್ತಕಗಳೇ ಪುಸ್ತಕಗಳು. ಕಡಿಮೆ ಬೆಲೆಗೆ ಅಪರೂಪದ ಪುಸ್ತಕಗಳು ದೊರೆಯುವುದೂ ಇಲ್ಲಿ ವಿಶೇಷವೇನಲ್ಲ. ಕೆಲವೊಮ್ಮೆ ಫ್ರಾನ್ಸ್, ಜರ್ಮನಿ, ರಷ್ಯಾ, ಇಂಗ್ಲೆಂಡ್‌ಗಳಲ್ಲಿ ಪ್ರಕಟವಾದ ಅಲಭ್ಯ ಕೃತಿಗಳೂ ಸಿಗುವುದಿದೆಯಂತೆ! ನಗರದ ಜನರು ಮಾತ್ರವಲ್ಲ ರಾಜ್ಯದ ಎಲ್ಲೆಡೆಯ ಮಂದಿ ಇಲ್ಲಿ ತಮಗೆ ಬೇಕಾದ ಪುಸ್ತಕ ಕೊಳ್ಳಲು ಬರುತ್ತಾರೆ. ಭಾರತದ ಎಲ್ಲ ಭಾಷೆಯ ಪುಸ್ತಕಗಳೂ ಇಲ್ಲಿ ಲಭ್ಯ. ಬಂಗಾಲದ ಅನೇಕ ಪ್ರಸಿದ್ಧ ಪ್ರಕಾಶನ ಸಂಸ್ಥೆಗಳು ಇಲ್ಲಿ ಬೀಡುಬಿಟ್ಟಿವೆ.

ಪ್ರಾಚೀನ ಕಾದಂಬರಿಗಳೇ, ಸಂಶೋಧನಾ ಪ್ರಬಂಧಗಳೇ, ವೈಜ್ಞಾನಿಕ ಉದ್ಗ್ರಂಥಗಳೇ, ಮುದ್ರಿತ ಪ್ರತಿ ಮುಗಿದು ಹೋದ ಹಳೆಯ ಪುಸ್ತಕಗಳೇ, ಶಾಲಾ- ಕಾಲೇಜು ಪಠ್ಯಗಳೇ, ಅಥವಾ ಮಕ್ಕಳ 'ಕಾಮಿಕ್' ಪುಸ್ತಕಗಳೇ? ಅಲ್ಲಿ ಸಿಗದಿದ್ದ ಪುಸ್ತಕಗಳಿಲ್ಲ ಎನ್ನುತ್ತಾರೆ. ಅಲ್ಲಲ್ಲಿ ಪುಸ್ತಕಗಳನ್ನು ತಡಕಾಡುತ್ತಿದ್ದಾಗ, 250 ವರ್ಷಗಳ ಹಿಂದಿನ ಒಂದು ಪುಸ್ತಕವೂ ನಮ್ಮ ಕಣ್ಣಿಗೆ ಬಿತ್ತು.

ರವಿವಾರ ಕೆಲವು ಅಂಗಡಿಗಳು ಮುಚ್ಚಿರುತ್ತವಾದರೂ, ಜನಜಂಗುಳಿಯೇನೂ ಕಡಿಮೆ ಇಲ್ಲ. ಬುದ್ಧಿವಂತಿಕೆಯಿಂದ ಚೌಕಾಶಿ

